OS No. 40/2022

DW-1

**(ಇಂದು ದಿಃ 16-12-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು)**

**ಪಾಟೀ ಸವಾಲುಃ- ವಾದಿ ಪರ ಶ್ರೀ.NR ವಕೀಲರಿಂದಃ-**

ವಾದಿ , 1 ನೇ ಪ್ರತಿವಾದಿ ಮತ್ತು 1ನೇ ಪ್ರತಿವಾದಿ ಅಣ್ಣನ ನಡುವೆ ಈ ಹಿಂದೆ ನಡೆದಿದ್ದ ಪ್ರಕರಣಗಳ ಬಗ್ಗೆ ನನಗೆ ಗೊತ್ತಿಲ್ಲ. 4ನೇ ಪ್ರತಿವಾದಿ ನನ್ನ ತಾಯಿ. ನನ್ನ ತಾಯಿ ಹಾಕಿರುವ ಪ್ರತಿವಾದದ ಪತ್ರದ ಸಂಗತಿಗಳು ನನಗೆ ಗೊತ್ತಿಲ್ಲ. ನನ್ನಮುಖ್ಯ ವಿಚಾರಣಾ ಪ್ರಮಾಣ ಪತ್ರದ ಸಂಗತಿಗಳು ನನಗೆ ಗೊತ್ತು .ನ ನ್ನ ಮುಖ್ಯ ವಿಚಾರಣ ಪ್ರಮಾಣ ಪತ್ರದಲ್ಲಿ ಅಸಲು ದಾವಾ ನಂಬರ 70/2008 ಮತ್ತು 76/2008 ರ ಬಗ್ಗೆ ಹೇಳಿ ಬರೆಸಿದ್ದೇನೆ. ಅಸಲು ದಾವೆ ನಂಬರ 76/2008 ರಲ್ಲಿ ಭೀಮಯ್ಯ ಲಚುಮಯ್ಯನ ಮಗ ಎಂದು ತೀರ್ಪು ಆಗಿದೆ ಎಂದರೆ ನನಗೆ ಗೊತ್ತಿಲ್ಲ. 4 ನೇ ಪ್ರತಿವಾದಿ ಮಾಡಿಕೊಂಡ ಖರೀದಿ ಪತ್ರವನ್ನು ನಾನು ನೋಡಿದ್ದೇನೆ. ಖರೀದಿ ಪಡೆದ ಸ್ವತ್ತಿನ ಉತ್ತರಕ್ಕೆ ಚೆಕ್ ಬಂದಿಯನ್ನು ದತ್ತಾತ್ರೇಯರವರ ಮನೆ ಎಂದು ತೋರಿಸಿದ್ದಾರೆ. ನನ್ನ ತಾಯಿ 10x50 ಅಡಿ ಖರೀದಿ ಪಡೆದುಕೊಂಡಿದ್ದರು. ಖರೀದಿ ಪತ್ರದ ಜೊತೆಗೆ ಮ್ಯಾಪ್ ಹಾಕಿದ್ದಾರೆ ಎಂದರೆ ಸರಿ. ಸದರಿ ಮ್ಯಾಪನ್ನು ನೋಡಿ ಸಾಕ್ಷಿ ಅವರು ಖರೀದಿಸಿರುವ ಭಾಗವನ್ನು ಕೇಸರಿ ಬಣ್ಣದಲ್ಲಿ ಗುರುತಿಸಿರುವ ಭಾಗವನ್ನು ಖರೀದಿ ಮಾಡಿದ್ದೇವೆ ಎಂದು ನೋಡಿ ಗುರುತಿಸಿರುತ್ತಾರೆ. ನಿಡಿ-1 ರಲ್ಲಿ ಸ್ವತ್ತಿನ ಉತ್ತರಕ್ಕೆ ಲಕ್ಷ್ಮೀನಾರಾಯಣ ಟೆಂಪಲ್ ರಸ್ತೆ ಎಂದು ಬರೆದಿದೆ ಎಂದರೆ ಸರಿ. 4 ನೇ ಪ್ರತಿವಾದಿ 1ನೇ ಪ್ರತಿವಾದಿಯಿಂದ ಖರೀದಿ ಮಾಡಿದ್ದರು. ಸದರಿ ಸ್ವತ್ತು 1ನೇ ಪ್ರತಿವಾದಿಗೆ ಹೇಗೆ ಬಂದಿತ್ತು ಎಂದರೆ ಅವರ ತಂದೆಯಿಂದ ಬಂದಿತ್ತು. ನಮಗೆ ಖರೀದಿ ಕೊಟ್ಟ ಸ್ವತ್ತಿನ ಉತ್ತರಕ್ಕೆ ಇರುವ ಎರಡು ಕೋಣೆಗಳು ಲಚುಮಯ್ಯನಿಗೆ ಸೇರಿದ್ದು ಎಂದರೆ ಸರಿ. ಲಚುಮಯ್ಯ ತೀರಿ ಹೋದ ನಂತರ 1ನೇ ಪ್ರತಿವಾದಿ , ವಾದಿ ಭೀಮಯ್ಯ, ಭೀಮಯ್ಯನ ಅಣ್ಣ ಮತ್ತು 1ನೇ ಪ್ರತಿವಾದಿಯ ತಾಯಿ ಯ ನಡುವೆ ಜಂಟಿ ಕಟುಂಬದ ಆಸ್ತಿಗಳ ಸಂಬಂಧ ವಿಭಾಗ ಆಯಿತು ಎಂದರೆ ನನಗೆ ಗೊತ್ತಿಲ್ಲ. ಸದರಿ ವಿಭಾಗದಲ್ಲಿ ಲಚುಮಯ್ಯನ ಜಮೀನು ಭೀಮಯ್ಯ ಮತ್ತು ಆತನ ಅಣ್ಣನಿಗೆ ಮತ್ತು ಮನೆ 1ನೇ ಪ್ರತಿವಾದಿ ಮತ್ತು ಅವರ ತಾಯಿಯ ಭಾಗಕ್ಕೆ ಬಂತು ಎಂದರೆ ನನಗೆಗೊತ್ತಿಲ್ಲ. ಸದರಿ ವಿಭಾಗ ಮೌಖಿಕವಾಗಿ ಆಗಿತ್ತು , ಆ ಬ ಗ್ಗೆ ದಾಖಲಾತಿ ಇರಲಿಲ್ಲ

ಎಂದರೆ ನನಗೆ ಗೊತ್ತಿಲ್ಲ, ವಾದಿ ಭೀಮಯ್ಯ ಹಾಜರುಪಡಿಸಿರುವ ದಾಖಲಾತಿಗಳನ್ನು ನೋಡಿದ್ದೇನೆ.

ವಾದಿ ಭೀಮಯ್ಯ ಈ ಹಿಂದಿನ ದಾವೆಯಲ್ಲಿ ನಿಪಿ-8 ಪ್ರಕಾರ ಜಮೀನು ನಮ್ಮ ಭಾಗಕ್ಕೆ ಬಂದಿತ್ತು ಮತ್ತು ಮನೆ 1ನೇ ಪ್ರತಿವಾದಿ ಭಾಗಕ್ಕೆ ಬಂದಿತ್ತು ಎಂದು ಪ್ರತಿವಾದ ಪತ್ರ ಸಲ್ಲಿಸಿದ್ದರು ಮತ್ತು ಅದರಂತೆ ಮುಖ್ಯ ವಿಚಾರಣಾ ಪ್ರಮಾಣ ಪತ್ರ ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ, ಸದರಿ ದಾವೆಯಲ್ಲಿ ಇಲ್ಲಿಯವರೆಗೆ ವಿಭಾಗ ಆಗಿಲ್ಲ ಕಾರಣ ಜಮೀನಿನಲ್ಲಿ ಭಾಗ ಆಗಬೇಕು ಎಂದು ತೀರ್ಪು ಆಗಿದೆ ಎಂದರೆ ನನಗೆ ಗೊತ್ತಿಲ್ಲ, ಸದರಿ ದಾವೆ ಯನ್ನು ಘೋಷಣೆ ಕೋರಿ ಸಲ್ಲಿಸಿದ್ದರಿಂದ ದಾವಾ ಮನೆಯನ್ನು ಆ ದಾವೆಯಲ್ಲಿ ಸೇರಿಸಿರಲಿಲ್ಲ ಎಂದರೆ ನನಗೆ ಗೊತ್ತಿಲ್ಲ, ದಾವೆಯಲ್ಲಿ ತೀರ್ಪು ಆದ ನಂತರ ಭೀಮಯ್ಯ RA No.17/2019 ರಲ್ಲಿ ಕ್ರಾಸ್ ಅಪೀಲು ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ, ಸದರಿ ಅಪೀಲು ಮತ್ತು ಕ್ರಾಸ್ ಅಪೀಲು ವಜಾ ಆದವು ಎಂದರೆ ನನಗೆ ಗೊತ್ತಿಲ್ಲ, ಸದರಿ ತೀರ್ಪನ್ನು ಪ್ರಶ್ನಿಸಿ ಯಾರು ಮೇಲ್ಮನವಿ ಸಲ್ಲಿಸಿಲ್ಲ ಎಂದರೆ ನನಗೆ ಗೊತ್ತಿಲ್ಲ, ಸದರಿ ದಾವೆ ತೀರ್ಪು ಅಂತಿಮಗೊಂಡ ನಂತರ ಈ ದಾವೆ ಸಲ್ಲಿಸಲು ಭೀಮಯ್ಯನಿಗೆ ಕಾರಣ ಉಂಟಾಯಿತು ಎಂದರೆ ಸರಿಯಲ್ಲ, ದಾವಾ ಸ್ವತ್ತು ವಾದಿ ಮತ್ತು 1ನೇ ಪ್ರತಿವಾದಿಯ ಒಟ್ಟು ಕುಟುಂಬದ ಸ್ವತ್ತು ಎಂದರೆ ಸರಿಯಲ್ಲ, ದಾವಾ ಸ್ವತ್ತು ಚಿನ್ನಮ್ಮನಿಗೆ ಹೇಗೆ ಬಂತು ಎಂದು ನನ್ನ ತಾಯಿ ಪರಿಶೀಲನೆ ಮಾಡಿಲ್ಲ ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರೆದು ಮುಟೇಷನ್ ನೋಡಿ ಖರೀದಿ ಮಾಡಿದ್ದೇವೆ ಎಂದು ಹೇಳುತ್ತಾರೆ. ಲಚುಮಯ್ಯನ ಹೆಂಡತಿ ಮಕ್ಕಳ ನಡುವೆ ಭಾಗ ಆಗಿದೆ ಅಥವ ಇಲ್ಲ ಎಂದು ನನ್ನ ತಾಯಿ ಪರಿಶೀಲನೆ ಮಾಡಿಲ್ಲ ಎಂದರೆ ನನಗೆ ಗೊತ್ತಿಲ್ಲ, ವಾದಿ ಭೀಮಯ್ಯ ದಾವಾ ಸ್ವತಿಡ್ತಿನಲ್ಲಿ ಭಾಗಕೋಡುವಂತೆ ದಿನಾಂಕ 07.02.2020 ರಂದು ಪ್ರತಿವಾದಿಯರನ್ನು ಕೇಳಿದರು ಆಗ ಪ್ರತಿವಾದಿಯರು ನೀರಾಕರಿಸಿದಾಗ ಈ ದಾವೆ ಸಲ್ಲಿಸಿದ್ದಾರೆ ಎಂದರೆ ಸರಿಯಲ್ಲ,

1ನೇ ಪ್ರತಿವಾದಿ ಅಥವಾ ಅವರ ತಾಯಿ ಗುರಮ್ಮ ದಾವಾ ಸ್ವತ್ತಿನ ಸಂಪೂರ್ಣ ಮಾಲೀಕರು ಆಗಿರಲಿಲ್ಲ ಎಂದರೆ ಸರಿಯಲ್ಲ, ಲಚುಮಯ್ಯ ತೀರಿ ಹೋದ ನಂತರ ಗುರುಮ್ಮ, ಚಿನ್ನಮ್ಮ, ಚಿನ್ನಯ್ಯ ಮತ್ತು ಭೀಮಯ್ಯರವರಿಗೆ ಲಚುಮಯ್ಯನ ಎಲ್ಲಾ ಆಸ್ತಿಗಳಲ್ಲಿ ಸಮ ಭಾಗ

ಇತ್ತು ಎಂದರೆ ಸರಿಯಲ್ಲ, ಕಾರಣ ಚಿನ್ನಮ್ಮ ಮತ್ತು ಗುರಮ್ಮ ಇಬ್ಬರಿಗೆ ಮಾತ್ರ ದಾವಾ ಸ್ವತ್ತನ್ನು ಮಾರಾಟ ಮಾಡುವ ಹಕ್ಕು ಅಧಿಕಾರ ಇರಲಿಲ್ಲ ಎಂದರೆ ಸರಿಯಲ್ಲ. ವಾದಿಗೆ ಗೊತ್ತಾಗದಂತೆ ಚಿನ್ನಮ್ಮ ದಾವಾ ಸ್ವತ್ತನ್ನು ನನ್ನ ತಾಯಿಗೆ ಮಾರಾಟ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. 1ನೇ ಪ್ರತಿವಾದಿ 4 ನೇ ಪ್ರತಿವಾದಿ ಪರವಾಗಿ ಬರೆದುಕೊಟ್ಟಿರುವ ಖರೀದಿ ಪತ್ರ ವಾದಿಗೆ ಬಂಧನಕಾರಕ ಅಲ್ಲ ಎಂದರೆ ಸರಿಯಲ್ಲ. ನನಗೆ ಈ ದಾವೆಯ ಬಗ್ಗೆ ಯಾವುದೇ ಮಾಹಿತಿ ಇಲ್ಲದಿದ್ದರು ಕೂಡ ವಾದಿಗೆ ಭಾಗ ಕೋಡಬಾರದು ಎಂದು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**(6 ರಿಂದ 8 ನೇ ಪ್ರತಿವಾದಿಯರ ಪರ ಶ್ರೀ SRP ವಕೀಲರು ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ)**

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ. ಸರಿ ಇದೆ.**

**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಸೇಡಂ.**